8 ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: (i) ತುಮಕೂರು ಜಿಲ್ಲಾ ಪಂಚಾಯತ್‌ನ ಆಡಳಿತ ಕುಸಿದಿರುವುದು ಹಾಗೂ ಅರಸೀಕೆರೆ ತಿಪಟೂರು, ತುರುವೇಕೆರೆ, ಇನ್ನಿತರ ಮಾರುಕಟ್ಟೆಯಲ್ಲಿ ರೈತರಿಗೆ ಹಣ ಪಾವತಿಸದೆ ಇರುವುದು

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ್ (ತುರುವೇಕೆರೆ): ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ನನ್ನದು ಎರಡು ಪ್ರಶ್ನೆ ಇದೆ. ಇದರಲ್ಲಿ ಯಾವುದಕ್ಕೆ ಉತ್ತರ ಬಂದಿದೆ ಎಂದು ತಾವು ನನಗೆ ಹೇಳಿದರೆ ಆ ವಿಷಯ ನಾನು ಪ್ರಸ್ತಾಪ ಮಾಡುತ್ತೇನೆ. ದಿನಾಂಕ 28ನೇ ತಾರೀಖು ತುಮಕೂರು ಜಿಲ್ಲಾ ಪಂಚಾಯತಿಯ ಆಡಳಿತ ಕುಸಿದು ಹೋಗಿದೆ ಎನ್ನುವ ಬಗ್ಗೆ. ನಾನು ಈಗಾಗಲೇ ವಿಷಯ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಒಂದೊಂದು ವಿಷಯಗಳು 3-4 ಸಲ ಪ್ರಸ್ತಾಪ ಆಗುತ್ತದೆ. ಸದನಕ್ಕೆ ಇದು ಸರಿ ಇಲ್ಲ ಎನ್ನುವ ಮಾತನ್ನು ಆ ಕಡೆಯಿಂದ ಪದೇ ಪದೇ ಮಾನ್ಯ ಮಂತ್ರಿಗಳು ಹೇಳುತ್ತಿರುತ್ತಾರೆ. ಆದರೆ ನನಗನಿಸುತ್ತದೆ. ತುಮಕೂರು ಪ್ರಮುಖವಾಗಿ ಕೊಬರಿ ಬೆಳೆಯತಕ್ಕಂಥಾ ಕೇಂದ್ರ. ಹಾಗೂ ಇಡೀ ರಾಜ್ಯದಲ್ಲಿ ಅರ್ಧ ರಾಜ್ಯ 14-15 ಜಿಲ್ಲೆಗಳಲ್ಲಿ ಕೊಬರಿ ಬೆಳೆಯುವಂತಹ ಸಂದರ್ಭದಲ್ಲಿ ಇವತ್ತು ಅರಸೀಕೆರೆ, ತಿಪಟೂರು, ತುರುವೇಕೆರೆ ಇನ್ನಿತರೇ ಎಲ್ಲಾ ಮಾರುಕಟ್ಟೆಗಳಲ್ಲಿ ಕೊಬರಿ ಕೊಂಡಂತಹ ಸಂದರ್ಭದಲ್ಲಿ ಸುಮಾರು ಎರಡು ತಿಂಗಳಿನಿಂದ ರೈತರಿಗೆ ಹಣಪಾವತಿಯಾಗದೇ ಸುಮಾರು 9 ಕೋಟಿರೂಪಾಯಿಗಳ ಚೆಕ್ ಏನು ಸರ್ಕಾರ ಕೊಟ್ಟಿದೆ ಆ ಚೆಕ್‌ಗಳು ಬೌನ್ಸ್ ಆಗಿವೆ. ಆದರ ಬಗ್ಗೆ ತಮಗೆ ನಾನು ಒಂದು ಕಾಪಿ ಕೊಟ್ಟಿದ್ದೇನೆ. ಸುಮಾರು ಒಂದು ತಿಂಗಳು 21 ದಿವಸಗಳಿಂದ ಕೊಟ್ಟಿರತಕ್ಕಂಥ ಎಲ್ಲಾ ಚೆಕ್‌ಗಳು ಬೌನ್ಸ್ ಆಗಿರುವಂತಹ ಸಂದರ್ಭದಲ್ಲಿ ರೈತರು ಮಾರುಕಟ್ಟೆಯಲ್ಲಿ ಧರಣಿ ಕುಳಿತಿದ್ದಾರೆ. ಸರ್ಕಾರ ಮುಂದೆ ಬಂದು ಅವರಿಗೆ ಸಮಾಧಾನ ಹೇಳುತ್ತಿಲ್ಲ ಎನ್ನುವಂತಹ ಮಾತನ್ನು ನಾನು ಅನೇಕ ಸಲ ಉಲ್ಲೇಖ ಮಾಡಿದ್ದೇನೆ. ಇವತ್ತು ಕೂಡ ನಾನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ತಮ್ಮ ಕಛೇರಿಯಲ್ಲಿ ಸಂಸತ್ ಸದಸ್ಯರು ಹೇಳಿದರು. ನಪೆಡ್‌ನಿಂದ ಹಣ ಬಂದಿದೆ ಆದರೂ ಕೂಡ ಇಲ್ಲಿರತಕ್ಕಂಥ ಫೆಡರೇಷನ್ ಮತ್ತು ಸರ್ಕಾರ ಎರಡೂ ಸೇರಿಕೊಂಡು ಇದರ ಬಗ್ಗೆ ಮುಂದೆ ಬರಬೇಕು, ಆ ಚೆಕ್‌ಗಳಿಗೆ ಹಣ ಬಿಡುಗಡೆ ಮಾಡಬೇಕು. ನಮ್ಮ ಜಿಲ್ಲೆಯ ಸಚಿವರಾದ ಮಾನ್ಯ ಜಯಚಂದ್ರರವರು ಉತ್ತರ ಕೊಡತಕ್ಕಂಥಾ ಸಂದರ್ಭದಲ್ಲಿ ಹಣದ ಕೊರತೆ ಇದೆ ಎನ್ನುವ ಮಾತನ್ನು ಉಲ್ಲೇಖ ಮಾಡಿದರು. ಆದರೆ ನಮ್ಮ ಮಾರುಕಟ್ಟೆ ಕೃಷಿ ಸಚಿವರು ಹೇಳಿದರು ಅವರ್ತ ನಿಧಿಯಲ್ಲಿ 29.16ಲಕ್ಷ ಹಣ ಇದೆ. ಈ ಹಣ ನಮ್ಮಲ್ಲಿ ಖರ್ಚಾಗಿಲ್ಲ ಎನ್ನುವ ಮಾತನ್ನು ಉಲ್ಲೇಖ ಮಾಡಿದರು. ಆದರೆ ಕೃಷಿ ಸಚಿವರ ಹೇಳಿಕೆ ಒಂದು ತರಹ ಇದೆ. ಕೃಷಿ ಮಾರುಕಟ್ಟೆ ಸಚಿವರ ಹೇಳಿಕೆ ಒಂದು ತರಹ ಇದೆ. ಆದರೆ ಅವರು ಹಣ ಕೊಡಲಿಕ್ಕೆ ಇರತಕ್ಕಂಥ ತೊಂದರೆ ಏನು? ಇದರ ಬಗ್ಗೆ ಏಕೆ ರೈತರಿಗೆ ಹಣ ಕೊಡುತ್ತಿಲ್ಲ? ಮತ್ತು ರೈತರು ತರತಕ್ಕಂಥ ಕೊಬರಿಯನ್ನು ಏಕೆ ವಾಪಸ್ಸು ಕಳುಹಿಸುತ್ತಿದ್ದಾರೆ? ಇದು ಬಹಳ ಮುಖ್ಯವಾಗಿರತಕ್ಕಂಥ ಪ್ರಶ್ನೆ. ನಾನು ಅನೇಕ ಸಲ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಆದರೂ ಸರಿಯಾದಂತಹ ಉತ್ತರ ಬರುತ್ತಿಲ್ಲ. ಹೋದ ಸಲ ಕಡಲೇಕಾಯಿ ಬೆಳೆದಂತಹ ರೈತರು ಈ ರೀತಿ ಆದಂತಹ ಸಂದರ್ಭದಲ್ಲಿ ಕಡಲೇ ಕಾಯಿ ಕೊಂಡುಕೊಳ್ಳುವಂತಹ ಸಮಯದಲ್ಲಿ

ಗೋಲಿಬಾರ್ ಆಗಿ ಅನೇಕ ಜನ ಸತ್ತಿದ್ದಾರೆ. ಈ ಸದನ ಮುಗಿದು ನಾವು ಆ ಕ್ಷೇತ್ರಗಳಿಗೆ ಹೋದಂತಹ ಸಂದರ್ಭದಲ್ಲಿ ರೈತರು ನಮ್ಮ ಮನೆಗಳಿಗೆ ಮುತ್ತಿಗೆ ಹಾಕುವಂತಹ ಸಂದರ್ಭ ಒಂದು ಕಡೆ. ಕೃಷಿ ಮಾರುಕಟ್ಟೆಗೆ ಮುತ್ತಿಗೆ ಹಾಕುವಂತಹ ಸಂದರ್ಭ ಒಂದು ಕಡೆ. ಗಲಭೆಗಳು ಆಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ವಾತಾವರಣ ಇದೆ. ಆ ದೃಷ್ಟಿಯಿಂದ ಸರ್ಕಾರ ನಿಖರವಾದ ಮಾಹಿತಿ ಕೊಡಬೇಕು ಮತ್ತು ಹಣ ಬಿಡುಗಡೆ ಮಾಡುವಂತಹ ಕೆಲಸ ಮಾಡಬೇಕು. ನಿರಾಸೆ ಮೂಡಿಸಿರುವಂತಹ ಕೊಬ್ಬರಿ ಖರೀದಿ ಎನ್ನುವ ಮಾತು ಪತ್ರಿಕೆಗಳಲ್ಲಿ ಬಂದಿದೆ. ಆ ಪತ್ರಿಕಾ ಹೇಳಿಕೆಯ ಕಾಪಿ ತಮಗೆ ಕಳುಹಿಸಿ ಕೊಡುತ್ತೇನೆ. ನಿನ್ನೆ ಕೂಡ ಮಾನ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ನಾಳೆಯೇ ಹಣ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ಹೇಳಿದರು. ಈ ಮಾತು ಹೇಳಿ 3-4 ದಿವಸ ಆಗಿದೆ ಇದುವರೆಗೂ ಏನೂ ವ್ಯವಸ್ಥೆ ಮಾಡಿಲ್ಲ. ಈ ಸದನ ಮುಗಿದು ನಾಳೆ ನಮ್ಮ ಕ್ಷೇತ್ರಗಳಿಗೆ ಹೋದಾಗ ರೈತರು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಗಲಾಟೆ ಮಾಡುವಂತಾದ್ದು ಇದೆ. ಕೃಷಿ ಮಾರುಕಟ್ಟೆಯಲ್ಲಿ ಗಲಾಟೆ ಮಾಡುವಂಥಾದ್ದು ಇದೆ. ಸರ್ಕಾರಿ ಕಛೇರಿಗಳಿಗೆ ನುಗ್ಗತಕ್ಕಂಥಾದ್ದು ಈ ವ್ಯವಸ್ಥೆಯಾಗುತ್ತದೆ ಸರ್ಕಾರದ ಚೆಕ್‌ಗಳು ಏಕೆ ಬೌನ್ಸ್ ಆಗಿವೆ ಎನ್ನುವಂತಾದ್ದನ್ನು ನಾನು ಪ್ರಶ್ನೆಮಾಡುತ್ತೇನೆ. ಇವತ್ತು ತುರುವೇಕೆರೆ ತಿಪಟೂರುಗಳಲ್ಲಿ ಕೊಂಡಿರತಕ್ಕ ಕೊಬ್ಬರಿಗೆ ರಸೀದಿಯನ್ನು ಕೊಟ್ಟಿದ್ದರೂ ಸಹ ಹಳ್ಳಿಯ ರೈತರಿಗೆ ಕೊಟ್ಟಿರತಕ್ಕಂಥ ಚೆಕ್‌ಗಳು ಬೌನ್ಸ್ ಆಗಲು ಕಾರಣವೇನು? ಇದಕ್ಕೆ ಸರ್ಕಾರ ನಿಖರವಾಗಿರತಕ್ಕಂಥ ಮಾಹಿತಿ ಕೊಡಬೇಕು. ಮತ್ತು ತಕ್ಷಣ ಆವರ್ತ ನಿಧಿಯಲ್ಲಿರತಕ್ಕ 29.16 ಕೋಟಿ ರೂಪಾಯಿ ಸರ್ಕಾರದಲ್ಲಿ ಇದೆ ಎಂದು ಏನು ಹೇಳಿದ್ದಾರೆ ಆ ಹಣವನ್ನು ತಕ್ಷಣ ಬಿಡುಗಡೆ ಮಾಡಿ ಬೌನ್ಸ್ ಆಗಿರುವಂತಹ ಚೆಕ್‌ಗಳನ್ನು ವಾಪಸ್ಸು ತರಿಸಿಕೊಂಡು ತಕ್ಷಣ ಆ ರೈತರಿಗೆ ಹಣ ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಕೃಷಿ ಸಚಿವರು ಬರಲಿ. ಆ ಮೇಲೆ ಉತ್ತರ ಕೊಡುತ್ತಾರೆ.

ವಿಷಯ: (ii) ಕೊಪ್ಪಳ ಪುರಸಭೆ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಗಳ ಅಗಲೀಕರಣ

ಶ್ರೀ ಕರಡಿ ಸಂಗಣ್ಣ (ಕೊಪ್ಪಳ): ಮಾನ್ಯ ಅಧ್ಯಕ್ಷರೇ, ಕೊಪ್ಪಳ ಪುರಸಭೆ ವ್ಯಾಪ್ತಿಯಲ್ಲಿ ಬರತಕ್ಕಂಥ ಮುಖ್ಯವಾದ ರಸ್ತೆ. ಈಗ ಈ ರಸ್ತೆಯ ಅಗಲೀಕರಣ ಪ್ರಾರಂಭಗೊಳಿಸಿದ್ದಾರೆ. ಇದರಿಂದ 14 ಸಾವಿರ ಅಂಗಡಿಗಳು ಮತ್ತು ಅಂಬೇಡ್ಕರ್ ಯೋಜನೆ ಅಡಿಯಲ್ಲಿ ಸುಮಾರು 20 ಮನೆಗಳನ್ನು ಕೆಡವಿದ್ದಾರೆ. ಅಲ್ಲಿನ ಜಿಲ್ಲಾಧಿಕಾರಿಗಳು ಈ ರಸ್ತೆ ದುರಸ್ಥಿ ಮತ್ತು ಒಳಚರಂಡಿ ವ್ಯವಸ್ಥೆ ಹಾಗೂ ಪರಿಹಾರ ಕೊಡಲು 100 ಲಕ್ಷ ರೂಪಾಯಿಗಳು ಬೇಕಾಗುತ್ತದೆ ಅಂತ ಹೇಳಿ ಈಗಾಗಲೇ ಮುನಿಸಿಪಲ್ ಡೈರೆಕ್ಟರ್‌ಗೆ ಪತ್ರ ಬರೆದಿದ್ದಾರೆ. ಆದ್ದರಿಂದ ಸರ್ಕಾರ ಆ ಹಣ ಕೊಡುವ ವ್ಯವಸ್ಥೆ ಮಾಡಬೇಕು. ಇದರ ಜೊತೆಯಲ್ಲಿ ಅಂಬೇಡ್ಕರ್ ಯೋಜನೆಯಡಿಯಲ್ಲಿ ಕೊಟ್ಟಿದ್ದ ನಿರ್ಗತಿಕರ ಮನೆಗಳು ಕೂಡ ಹೋಗಿವೆ. ಸುಮಾರು 20 ಮನೆಗಳು ಹೋಗಿವೆ, ಆ ಮನೆಗಳನ್ನು ಸರ್ಕಾರ ಪುನಃ ಕಟ್ಟಿಸಿಕೊಡುತ್ತಾರೆಯೇ ಈ ಬಗ್ಗೆ ಉತ್ತರ ಕೊಡಬೇಕೆಂದು ನಾನು ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.